<u>ಅಸಲು ದಾವಾಃ-</u> 348/2014 ಡಿ.ಡಬ್ಲ್ಯೂಃ- 1

ದಿನಾಂಕಃ 01.08.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದ</u>

1 ನೇ ಪ್ರತಿವಾದಿ ನನಗೆ ಏನಾಗಬೇಕು ಎಂದರೆ ನನ್ನ ತಾಯಿ. ಪ್ರತಿವಾದ ಪತ್ರಕ್ಕೆ ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೇ. ದಾವಾ ಸ್ವತ್ತನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಆ ಸ್ವತ್ತು ಇಲ್ಲ ಎಂದು ನುಡಿಯುತ್ತಾರೆ. ಯಾವ ಅರ್ಥದಲ್ಲಿ ದಾವಾ ಸ್ವತ್ತು ಇಲ್ಲ ಎಂದರೆ ಸಾಕ್ಷಿಯು ಸೈಟ್ ನಂ.2 ಅಸ್ತಿತ್ವದಲ್ಲಿಲ್ಲ ಎಂದು ನುಡಿಯುತ್ತಾರೆ. ಸೈಟ್ ನಂ.2 ಅಸ್ತಿತ್ವದಲ್ಲಿಲ್ಲ ಎಂದು ಪ್ರತಿವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಹೇಳಿದ್ದೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ.

ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಸೈಟ್ ಸರ್ವೆ ನಂ.117 ರಲ್ಲಿ ಬರುತ್ತದೆ ಎಂದು ಹೇಳಿದ್ದು ಸದರಿ ಸರ್ವೆ ನಂಬರ್ 117 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ 8 ಎಕರೆ 20 ಗುಂಟೆ ಎಂದು ನುಡಿಯುತ್ತಾರೆ. ಸದರಿ 8 ಎಕರೆ 20 ಗುಂಟೆ ಈಗಲೂ ಕಂದಾಯ ಭೂಮಿಯಾಗಿ ಉಳಿದಿದೆಯಾ ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿ ಅಧಿಕಾರಿಗಳು ಅದನ್ನು ಸ್ವಾಧೀನ ಪಡೆದುಕೊಂಡು ಲೇಔಟ್‌ಗಳನ್ನು ಮಾಡಿ ಸೈಟ್ ಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 8 ಎಕರೆ 20 ಗುಂಟೆ ಜಮೀನು ಲೇಔಟ್ ಗಳಾಗಿ ಭೂಪರಿವರ್ತನೆ ಆಗಿರುವ ಲೇಔಟ್ ಪ್ಲಾನ್ ನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ಸದರಿ ಲೇಔಟ್ ಪ್ಲಾನ್ ನ್ನು ಎಲ್ಲಿ ನೋಡಿದ್ದೇನೆ ಎಂದರೆ ಪಟ್ಟಣ ಪಂಚಾಯತಿಯಲ್ಲಿ ನೋಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಲೇಔಟ್ ಪ್ಲಾನ್ ನ್ನು ಯಾವಾಗ ನೋಡಿರುತ್ತೇನೆ ಎಂದರೆ ಅಂದಾಜು 1988 ರಲ್ಲಿ ನಾವು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಎಂದು ನುಡಿಯುತ್ತಾರೆ.

ಸದರಿ 8 ಎಕರೆ 20 ಗುಂಟೆಗೆ ಒಂದೇ ಲೇಔಟ್ ಮಾಡಿದ್ದಾರಾ ಅಥವಾ ಬೇರೆ ಬೇರೆ ಲೇಔಟ್ ಮಾಡಿದ್ದಾರಾ ಎಂದರೆ ಸಾಕ್ಷಿಯು ಬೇರೆ ಬೇರೆ ವಿಧ ವಿಧವಾಗಿ ಲೇಔಟ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಸೈಟ್ ಇದೆ ಎಂದು ಹೇಳಲಾದ ಲೇಔಟ್ ನ್ನು ಯಾವಾಗ ಮಾಡಿರುತ್ತಾರೆ ಎಂದರೆ 1963 ರಲ್ಲಿ ಎಂದು ನುಡಿಯುತ್ತಾರೆ. ನಮ್ಮ ಸೈಟ್ ಇರುವ ಸದರಿ ಲೇಔಟ್ ನಲ್ಲಿ ಒಟ್ಟು ಎಷ್ಟು ಸೈಟ್‌ಗಳಿದ್ದಾವೆ ಎಂದರೆ 23. ಸದರಿ 23 ಸೈಟ್ ಗಳಿರುವ ಲೇಔಟ್ ಪ್ಲಾನ್ ನ್ನು ಟೌನ್ ಪಂಚಾಯತಿಯಿಂದ ಅರ್ಜಿ ಹಾಕಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಬ್ಲೂಪ್ರಿಂಟ್ ಕಾಪಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಸೈಟ್ ಇದೆ ಎಂದು ಹೇಳಲಾದ ಲೇಔಟ್ ಸರ್ವೆ ನಂ.117 ರಲ್ಲಿ ಯಾವ ಭಾಗದಿಂದ ಪ್ರಾರಂಭವಾಗುತ್ತದೆ ಎಂದರೆ ಪಶ್ಚಿಮ ಭಾಗದಿಂದ ಎಂದು ನುಡಿಯುತ್ತಾರೆ. ಸದರಿ ಲೇಔಟ್ ಆಯನೂರು ಶಿವಮೊಗ್ಗಕ್ಕೆ ಹೋಗುವ ರಸ್ತೆಯ ಪೂರ್ವ ಭಾಗಕ್ಕೆ ಬರುತ್ತದೆ ಎಂದರೆ ಸರಿ. ಹರಾಜಿನಲ್ಲಿ ಯಾರು ಎಷ್ಟು ಸೈಟ್ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ವೀರಪ್ಪರವರು ಸೈಟ್ ನಂ.1 ಖರೀದಿ ಮಾಡಿದ್ದು, ನಮ್ಮ ಚಿಕ್ಕಂಪ್ಪಂದಿರಾದ ಸದಾಶಿವಪ್ಪ ಹಾಗೂ ಬಸವರಾಜಪ್ಪ ರವರು ಸೈಟ್ ನಂ.2 ಮತ್ತು 3 ನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸೈಟ್ ನಂ.1 ನ್ನು ನಮ್ಮ ತಂದೆಯವರೇ ಖರೀದಿ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ದಿನದ ಕ್ರಯಪತ್ರ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಸೈಟ್ ನಂ.1 ನ್ನು ನಮ್ಮ ತಂದೆಯವರೇ ಖರೀದಿ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. 100 ರೂ ಗಿಂತ ಹೆಚ್ಚಿನ ಸ್ಥಿರಾಸ್ತಿಯನ್ನು ನೋಂದಾಯಿತ ಪತ್ರದ ಮೂಲಕವೇ ಖರೀದಿ ಮಾಡಬೇಕಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಆ ಕಾನೂನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸೈಟ್ ನಂ.1 ರ ಖರೀದಿಯ ಹಣಸಂದಾಯದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಅಥವಾ ರಶೀದಿಯನ್ನು ಕೊಟ್ಟಿದ್ದೀರಾ ಎಂದರೆ ಇಲ್ಲ.

ಸೈಟ್ ನಂ.1 ನಮ್ಮದು ಎಂದು ಹೇಳಿದ್ದು ಸದರಿ ಸೈಟ್ ನ ಚೆಕ್ಕುಬಂಧಿ ಎಂದರೆ ಪೂ–ಸೈಟ್ ನಂ.2, ಪ–ಹೊನ್ನಾಳಿ ಆಯನೂರು ರಸ್ತೆ, ಉ–ಗ್ರಾಮ ಪಂಚಾಯತಿ ರಸ್ತೆ, ದ–ಕನ್ಸ್‌ರ್ ವೆನ್ಸಿ ಜಾಗ

ಎಂದು ನುಡಿಯುತ್ತಾರೆ. ಸಾರ್ವಜನಿಕ ಆಸ್ತಿಯನ್ನು ಸ್ಥಳೀಯ ಸಂಸ್ಥೆಗಳು ಮಾರಾಟ ಮಾಡಿದಾಗ ಅದರ ಸಂಬಂಧ ಸಾಮಾನ್ಯವಾಗಿ ಸೇಲ್ ಸರ್ಟಿಫಿಕೇಟ್ ನೀಡಿರುತ್ತಾರೆ ಎಂದರೆ ಸರಿ. ಸೈಟ್ ನಂ.1 ಕ್ಕೆ ಸಂಬಂಧಿಸಿದಂತೆ ನಮ್ಮ ತಂದೆಯವರ ಹೆಸರಿಗೆ ಸೇಲ್ ಸರ್ಟಿಫಿಕೇಟ್ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. 1963 ರಲ್ಲಿ ನಮ್ಮ ತಂದೆಯವರು ಸೈಟ್ ನಂ.1 ನ್ನು ಖರೀದಿ ಮಾಡಿದ್ದಾರೆ ಎಂದು ಹೇಳಿದ್ದು ನಾನು ಆ ಸಮಯದಲ್ಲಿ ಜನಿಸಿರಲಿಲ್ಲ ಹಾಗಾಗಿ ವ್ಯವಹಾರಗಳ ಬಗ್ಗೆ ಖುದ್ದು ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಸದರಿ ಲೇಔಟ್ ನ ಪಶ್ಚಿಮಕ್ಕೆ ಕುಮಟ–ಕಾಡುಮಡಗಿ ರಾಜ್ಯ ಹೆದ್ದಾರಿ ಬರುತ್ತದೆ ಎಂದರೆ ಸರಿ. ಕುಮಟ–ಕಾಡುಮಡಗಿ ರಸ್ತೆಯು ರಾಜ್ಯ ಹೆದ್ದಾರಿ ಎಂದು ಯಾವಾಗ ನೋಟಿಫಿಕೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು 1998 ರ ನಂತರ ಆಗಿರಬಹುದು ಎಂದು ನುಡಿಯುತ್ತಾರೆ. 1998 ಕ್ಕಿಂತ ಪೂರ್ವದಲ್ಲಿ ಸದರಿ ರಸ್ತೆಯು ಎಷ್ಟು ಅಗಲ ಇತ್ತು ಎಂದರೆ ಸಾಕ್ಷಿಯು 20 ಅಡಿಗಿಂತ ಕಡಿಮೆ ಇತ್ತು ಎಂದು ನುಡಿಯುತ್ತಾರೆ. ಕುಮಟ–ಕಾಡುಮಡಗಿ ರಾಜ್ಯ ಹೆದ್ದಾರಿಯು ನ್ಯಾಮತಿ ಗ್ರಾಮದ ಹೊರಭಾಗದಿಂದ ಹೋಗುತ್ತದೆ ಎಂದರೆ ಸರಿ.

1973 ರಲ್ಲಿ ವಿಭಾಗ ಆಗಿದೆ ಎಂದು ನಮ್ಮ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿದ್ದು ಯಾರ ಮಧ್ಯೆ ಯಾವ ಆಸ್ತಿಗಳು ಹಂಚಿಕೆಯಾಗಿರುತ್ತದೆ ಎಂದರೆ ನನ್ನ ತಂದೆಯ ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿದ್ದು ಅದರಂತೆ ಸೈಟ್ ನಂ.1 ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸೈಟ್ ನಂ.2 ಮತ್ತು 3 ನ್ನು ನನ್ನ ತಂದೆಯ ಚಿಕ್ಕಪ್ಪದಿರು ಖರೀದಿ ಮಾಡಿದ್ದಾರೆ ಎಂದು ಹೇಳಿದ್ದು ಸದರಿವಿಭಾಗ ಪತ್ರದಲ್ಲಿ ಯಾರಿಗೆ ಹಂಚಿಕೆಯಾಗಿರುತ್ತವೆ ಎಂದರೆ ಸಾಕ್ಷಿಯು ಸೈಟ್ ನಂ.2 ಚಂದ್ರಶೇಖರಪ್ಪ ರವರಿಗೆ ಹಾಗೂ ಸೈಟ್ ನಂ.3 ಸದಾಶಿವಪ್ಪ ರವರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಲೇಔಟ್ ಸೈಟ್ ನಂ.1 ರಿಂದ 3 ನ್ನು ನಮ್ಮ ಕುಟುಂಬದವರು ಹಂಚಿಕೊಂಡಿರುತ್ತಾರೆ ಎಂದರೆ ಸರಿ.

1973 ರಲ್ಲಿ ನನ್ನ ತಂದೆ ಹಾಗೂ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳಲಾದ ವಿಭಾಗ ಪತ್ರದ ದೃಢೀಕೃತ ನಕಲು ನಿಡಿ 16 ರಾ ಎಂದರೆ ಹೌದು. ನಿಡಿ 16 ರಲ್ಲಿ 152

ಎಂದು ನಮೂದಾಗಿರುವ ಪುಟ ಸಂಖ್ಯೆ ಯಲ್ಲಿ  ನಮೂದಿಸಿರುವ ಕ್ರಮ ಸಂಖ್ಯೆ 8 ರ ಆಸ್ತಿಯು ನನ್ನ ತಂದೆಯ ಹಿಸ್ಸೆಗೆ ತೋರಿಸಿರುತ್ತಾರೆ  ಎಂದರೆ ಸರಿ.  ನಿಡಿ 16 ರ ವಿಭಾಗ ಪತ್ರದ ಪ್ರಕಾರ ಸೈಟ್ ನಂ.1 ರ ಚೆಕ್ಕುಬಂಧಿ ಏನು ನಮೂದು ಇದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಚಂದ್ರಶೇಖರಪ್ಪರವರ ಹಿಸ್ಸಾ ಸೈಟ್, ಪಶ್ಚಿಮಕ್ಕೆ  ಹೊನ್ನಾಳಿ ಆಯನೂರು ರಸ್ತೆ, ಉತ್ತರಕ್ಕೆ ಮುನ್ಸಿಪಾಲ್ ರಸ್ತೆ, ದಕ್ಷಿಣಕ್ಕೆ ಕನ್ಸ್ ರ್ ವೆನ್ಸಿ ರಸ್ತೆ ಎಂದು ನುಡಿಯುತ್ತಾರೆ.

ಸೈಟ್ ನಂ.2 ನಿಡಿ 16 ರಂತೆ ಚಂದ್ರಶೇಖರಪ್ಪ ರವರಿಗೆ ಹೋಗಿರುತ್ತದೆ ಎಂದು ಹೇಳಿದ್ದು ಸದರಿ ವಿಭಾಗ ಪತ್ರದಲ್ಲಿ ಸೈಟ್ ನಂ.2 ರ ಚೆಕ್ಕುಬಂಧಿ ಏನು ನಮೂದಾಗಿದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಸದಾಶಿವಪ್ಪರವರ ಹಿಸ್ಸಾ ಸೈಟ್, ಪಶ್ಚಿಮಕ್ಕೆ ಎಂ. ವೀರಪ್ಪರವರ ಸೈಟ್, ಉತ್ತರಕ್ಕೆ  ಮುನ್ಸಿಪಾಲ್ ರಸ್ತೆ, ದಕ್ಷಿಣಕ್ಕೆ ಕನ್ಸ್ ರ್ ವೆನ್ಸಿ ರಸ್ತೆ ಎಂದು ನುಡಿಯುತ್ತಾರೆ.  ನಿಡಿ 16 ರ ವಿಭಾಗ ಪತ್ರದ ಆಧಾರದ ಮೇರೆಗೆ ಸೈಟ್ ನಂ.1 ನಮಗೆ ಸೇರಿದ್ದು ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

ನಿಡಿ 16 ರಲ್ಲಿ ಸದಾಶಿವಪ್ಪರವರಿಗೆ ಸೈಟ್ ನಂ.3 ಹೋಗಿದೆ ಎಂದು ನಮೂದು ಇದೆ ಎಂದರೆ ಸರಿ.   ನಿಡಿ 16 ರ ವಿಭಾಗ ಪತ್ರದಲ್ಲಿ ತೋರಿಸಿರುವ ಸೈಟ್ ನಂ.1 ರಿಂದ 3 ರ ಚೆಕ್ಕುಬಂಧಿಯ ಬಗ್ಗೆ ನಮ್ಮ ಯಾವುದೇ ತಕರಾರು ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ